MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 25-10-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪಾಮೆಣ್ಣೆ ದರ ಇನ್ನಷ್ಟು ಹೆಚ್ಚಳ ಸಾಧ್ಯತೆ

ಉತ್ಪಾದಕ ದೇಶಗಳಲ್ಲಿ ಮಳೆ ಹೆಚ್ಚಳದಿಂದ ಉತ್ಪಾದನೆ ಕುಂಠಿತವಾಗುವ ನಿರೀಕ್ಷೆಯಿದೆ. ಆಹಾರ ವಲಯ ಹಾಗೂ ಬಯೋ ಇಂಧನಕ್ಕಾಗಿ ಬೇಡಿಕೆ ಹೆಚ್ಚಳವಾಗುತ್ತಿದೆ. ಇದರಿಂದ ಪಾಮೆಣ್ಣೆ ದರ ಮುಂಬರುವ ದಿನಗಳಲ್ಲಿ ಮತ್ತಷ್ಟು ಪ್ರಬಲವಾಗುವ ಸೂಚನೆಯಿದೆ. ಇಂಡೋನೇಶಿಯಾ ರಫ್ತು ತೆರಿಗೆ ಮತ್ತೆ ಪುನರಾಂಭಿಸಿದರೆ ದರ ಹೆಚ್ಚಳಕ್ಕೆ ಕಾರಣವಾಗಬಹುದು. ಮಲೇಶಿಯನ್ ಪಾಮೆಣ್ಣೆ ದರ ಸತತ 2 ಅವಧಿಗಳಲ್ಲಿ ಹೆಚ್ಚಳವಾಗಿದೆ. ಇಂಡೋನೇಶಿಯಾದ ಪಾಮೆಣ್ಣೆ ದಾಸ್ತಾನು ಒಂದು ತಿಂಗಳ ಹಿಂದೆ 5.91 ಮಿಲಿಯನ್ ಟನ್‌ಗಳಿದ್ದು ಈ 4.04 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಜೂನ್ ಅಂತ್ಯಕ್ಕೆ ಇದು 6.69 ಮಿಲಿಯನ್ ಟನ್‌ಗಳಿತ್ತೆನ್ನಲಾಗಿದೆ. ದಾಸ್ತಾನು ಇಳಿಕೆಯಾದಾಗ ಇಂಡೋನೇಶಿಯಾ ರಫ್ತು ತೆರಿಗೆ ಪುನರಾರಂಭಿಸಬಹುದು. ಹಾಗೆಯೇ ಕಪ್ಪು ಸಮುದ್ರ ವಲಯದಿಂದ ಪರ್ಯಾಯ ಸೂರ್ಯಕಾಂತಿ ಎಣ್ಣೆಉ ಪೂರೈಕೆ ಸಮರ್ಪಕವಾಗಿರದಿರುವುದೂ ಪಾಮೆಣ್ಣೆ ದರ ಹೆಚ್ಚಳಕ್ಕೆ ಕಾರಣವಾಗಬಹುದು. ಸೋಯಾಬೀನ್ ಎಣ್ಣೆ ದರವೂ ಪ್ರಬಲವಿದೆ.

## ಜಾಗತಿಕ ಅಕ್ಕಿ ದಾಸ್ತಾನು 2023 ರಲ್ಲಿ ಹಿಂದಿನ ವರ್ಷಗಳ ಕನಿಷ್ಠ ಮಟ್ಟಕ್ಕೆ

ಜಾಗತಿಕ ಅಕ್ಕಿ ದಾಸ್ತಾನು 2023 ರಲ್ಲಿ ಹಿಂದಿನ 5 ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಯಲಿದೆಯೆನ್ನಲಾಗಿದೆ. ಭಾರತದ ರಫ್ತು ನಿರ್ಬಂಧ ಸರಿದೂಗಿಸುವಷ್ಟು ದಾಸ್ತಾನು ಥೈಲಾಂಡ್ ಹಾಗೂ ವಿಯೆಟ್ನಾಂಗಳು ಹೊಂದಿಲ್ಲವೆನ್ನಲಾಗಿದೆ. ಭಾರತದ ರಫ್ತು ನಿರ್ಬಂಧ ಗಳ ನಂತರ ಜಾಗತಿಕ ಅಕ್ಕಿ ದರ ಹೆಚ್ಚಳವಾಗಿದೆ. ಜಾಗತಿಕ ಅಕ್ಕಿ ದರ ಇನ್ನಷ್ಟು ಹೆಚ್ಚಳವಾಗಬಹುದೆನ್ನಲಾಗಿದೆ. ಭಾರತದಿಂದ ಅಕ್ಕಿ ರಫ್ತು 2022–23 ರಲ್ಲಿ 17 ಮಿಲಿಯನ್ ಟನ್‌ಗಳಿಗಿಳಿಕೆಯಾಗಬಹುದೆನ್ನಲಾಗಿದೆ. ಇದರಿಂದ ಜಾಗತಿಕ ಅಕ್ಕಿ ದರದ ಸ್ಥಿರತೆಯ ಅಂತ್ಯವಾಗಲಿದೆಯೆನ್ನಲಾಗಿದೆ.

## ಸರಕಾರದಿಂದ 1 ಲಕ್ಷ ಟನ್ ತೊಗರಿ ಹಾಗೂ 50 ಸಾವಿರ ಟನ್ ಉದ್ದು ಆಮದು

ಸರಕಾರ ದೇಶೀ ದರ ನಿಯಂತ್ರಣದಂಗವಾಗಿ 1 ಲಕ್ಷ ಟನ್ ತೊಗರಿ ಹಾಗೂ 50000 ಟನ್ ಉದ್ದು ವಿದೇಶದಿಂದ ಆಮದು ಮಾಡಲಾರಂಭಿಸಿದೆಯೆನ್ನಲಾಗಿದೆ. ಅಲ್ಲದೆ ಆಮದು ಲೆವಿ ಕಡಿತ ಅವಧಿ ವಿಸ್ತರಿಸಿದೆಯೆನ್ನಲಾಗಿದೆ. ಹವಾಮಾನ ವೈಪರೀತ್ಯದಿಂದ ಉತ್ಪಾದನೆ ಇಳಿಕೆಯಾಗುವ ಪೂರೈಕೆ ಕೊರತೆ ನಿವಾರಣೆಗಾಗಿ ಹಾಗೂ ದೇಶೀ ದರ ನಿಯಂತ್ರಿಸಲು ಈ ಕ್ರಮಗಳು ಪೂರಕವಾಗಲಿದೆಯೆನ್ನಲಾಗಿದೆ.